

ಸಂಪಾದಕೀಯ

# ಮನುಕುಲಕ್ಕೆ ಎದುರಾಗಿರುವ ಸವಾಲು

ಇಡೀ ಪ್ರಪಂಚವೇ ತಲ್ಲಣಿಸಿದೆ. ಹಿಂದೆಂದೂ ಕಂಡು ಕೇಳರಿಯದ ಭೀಕರ ಕೊರೊನ ವೈರಸ್‌ನಿಂದಾಗಿ ಪ್ರಪಂಚದ ಎಲ್ಲ ದೇಶಗಳಲ್ಲೂ ಭೀಕರ ಸಾವು, ನೋವು, ಭಯಭೀತಿಗಳುಂಟಾಗಿವೆ; ಅದನ್ನು ತಡೆಗಟ್ಟುವ ಹಾಗೂ ನಿಯಂತ್ರಿಸುವ ಕಾರ್ಯದಲ್ಲಿ ಜನಸಾಮಾನ್ಯರ ಜೀವನ ಅಸ್ತವ್ಯಸ್ತವಾಗಿದೆ. ಅಗತ್ಯ ವಸ್ತುಗಳ ಪೂರೈಕೆ, ಸಂಚಾರ-ಸಾಗಾಟ, ಕೃಷಿ ಮುಂತಾದ ಉತ್ಪನ್ನಗಳ ಸರಬರಾಜು, ಕೈಗಾರಿಕೆಗಳ ನಿಲುಗಡೆ, ಆರ್ಥಿಕ ಅವನತಿ — ಇವು ಒಂದೆಡೆ. ಇದರೊಂದಿಗೆ ಜನಸಾಮಾನ್ಯರಲ್ಲಿ ಅರಿವಿನ ಕೊರತೆ, ಇದರಿಂದಾಗಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವಲ್ಲಿ ಉಂಟಾಗುವ ಅಶಿಸ್ತು, ಪರಿಣಾಮವಾಗಿ ರಕ್ಷಣಾ ಕ್ರಮಗಳು, ಇದರೊಂದಿಗೆ ನಾನಾ ಬಗೆಯ ಸುಳ್ಳು, ವದಂತಿಗಳಿಂದ ಆತಂಕ ಸೃಷ್ಟಿಯಾಗುವುದು — ಇತ್ಯಾದಿ ಗೊಂದಲಗಳು ಇನ್ನೊಂದೆಡೆ. ಒಂದೆರಡು ತಿಂಗಳಿಗೂ ಹೆಚ್ಚುಕಾಲ ಮನೆಯಲ್ಲೇ ಕಡ್ಡಾಯವಾಗಿ ಇಡೀ ದೇಶದ ಜನತೆ ಇರಬೇಕಾಗಿ ಬಂದ ಪರಿಸ್ಥಿತಿಯಲ್ಲಿ ನಾವು ಆತ್ಮಾವಲೋಕನ ಮಾಡಿಕೊಳ್ಳುತ್ತ ಕೆಲವೊಂದು ಸೂಕ್ಷ್ಮ ವಿಚಾರಗಳನ್ನು ಅರಿತುಕೊಳ್ಳಲು ಪ್ರಯತ್ನಿಸೋಣ.

## ಪ್ರಪಂಚದ ಅಸ್ಥಿರತೆ

ಮನುಷ್ಯನಲ್ಲಿ ಒಂದು ಪ್ರವೃತ್ತಿಯಿದೆ. ತನಗೆ ಯಾವುದು ಒಗ್ಗಿಕೊಳ್ಳುವುದೋ ಅದಕ್ಕೆ ಬಲವಾಗಿ ಅಂಟಿಕೊಳ್ಳುವುದು. ತನ್ನ ಮನೆ, ಕಾರು, ಉದ್ಯೋಗ, ಸ್ಥಾನಮಾನ ಇವೆಲ್ಲವೂ ನಿರಂತರ ಈಗಿದ್ದ ಹಾಗೆಯೇ ಇರಬೇಕೆಂದು ಪ್ರತಿಯೊಬ್ಬರೂ ಬಯಸುತ್ತಾರೆ. ತಾನು ಈಗಿದ್ದ ಹಾಗೆಯೇ ಯಾವಾಗಲೂ ಇರುತ್ತೇನೆ — ತನಗೇನೂ ಆಗದು ಎಂಬುದೇ ಅವರ ನಂಬಿಕೆ. ಈ ನಂಬಿಕೆಯನ್ನು ಆಧರಿಸಿಯೇ ಮಾನವನು ತನ್ನ ಯೋಚನೆ, ಕನಸು ಆಶೋತ್ತರಗಳನ್ನು ಸಾಕಾರಗೊಳಿಸುತ್ತಾನೆ. ಇನ್ನಷ್ಟು ಸಮೃದ್ಧಿ, ಸುಖ, ವೈಭವಗಳನ್ನು ಕಂಡುಕೊಳ್ಳಲು ಹವಣಿಸುತ್ತಾನೆ. ಆದರೆ ತಾನು ನಂಬಿರುವ ಭದ್ರಬುನಾದಿಯೇ ಕುಸಿಯತೊಡಗಿದರೆ? ಯಾವಾಗಲೂ ಸ್ಥಿರವಾಗಿ ಇರುತ್ತದೆ ಎಂದು ನಂಬಿರುವ ಪ್ರತಿಯೊಂದೂ ಮಣ್ಣುಪಾಲಾಗಲು ತೊಡಗಿದರೆ? ಜಾತಿ, ಸ್ಥಾನ, ಶ್ರೀಮಂತಿಕೆಗಳ ಅಂತರವಿಲ್ಲದೆ ಜನ ಆತಂಕಪಡುತ್ತಾರೆ. ನಾಶದ ಭಯ ಎಲ್ಲರನ್ನೂ ಕಾಡುತ್ತದೆ. ಮೊದಲು ತಮ್ಮ ವಸ್ತು, ಸೊತ್ತುಗಳ ರಕ್ಷಣೆಗೆ ಗಮನ ಕೊಡುತ್ತಾರೆ. ಆದರೆ ಪ್ರಾಣಕ್ಕೇ ಅಪಾಯ ಬಂದಾಗ ಸೊತ್ತು ಹೋದರೆ ಹೋಗಲಿ ಎನ್ನುತ್ತಾರೆ. ಇಡೀ ದೇಶವನ್ನು, ಪ್ರಪಂಚವನ್ನು ಕಬಳಿಸುವ ಮಹಾಮಾರಿ ಬಂದಾಗ ಓಡಿಹೋಗಿ ಅಡಗಿ ಕುಳಿತಿಕೊಳ್ಳುವುದೆಲ್ಲಿ? 'ತನಗೇನೂ ಆಗದು' ಎಂದು ಸೋಮಾರಿಯಾಗಿ ಕುಳಿತ ಮೂರ್ಖ ಪಂಡಿತರು ತಮ್ಮ ಮನೆಗೇ ಬೆಂಕಿ ಹತ್ತಿಕೊಂಡಾಗಲೂ ಎದ್ದು ಬರಲಿಲ್ಲ. ಮನೆ ಸುಟ್ಟುಹೋಗಿ ಅವರನ್ನೇ ಬೆಂಕಿ ಸುಡಲಾರಂಭಿಸಿದಾಗ ಅವರು ಹಾಹಾಕಾರ ಮಾಡಿದರಂತೆ. ಈಗಿನ ಭೀಕರ ಪರಿಸ್ಥಿತಿಯಲ್ಲೂ ಇದೇ ರೀತಿ 'ನಮಗೇನೂ ಆಗದು' ಎಂದು ಎಲ್ಲೆಡೆ ಓಡಾಡಿ ಕೊರೊನ ತಗಲಿಸಿಕೊಂಡವರಿದ್ದಾರೆ; ಇತರರಿಗೂ ಹಬ್ಬಿಸಿದ್ದಾರೆ. ತಾಮಸಿಕ, ಜಾಡ್ಯ ಪ್ರವೃತ್ತಿಯನ್ನು ಬಿಟ್ಟು, ಅರಿವಿನಿಂದ, ಜಾಗ್ರತೆಯಿಂದ ಇರಬೇಕಾದ ಅಗತ್ಯವನ್ನು ಈ ವಿಚಿತ್ರ ಪರಿಸ್ಥಿತಿ ನಮಗೆ ಕಲಿಸಿಕೊಟ್ಟಿದೆ.

ಪ್ರತಿಕ್ಷಣವೂ ಜಗತ್ತು ಚಲಿಸುತ್ತಿದೆ, ಪರಿಸ್ಥಿತಿ ಬದಲಾಗುತ್ತಿದೆ. ಎಂದು ವಿಜ್ಞಾನ, ತತ್ತ್ವ — ಎರಡೂ ಹೇಳುತ್ತಿವೆ. ಆದರೂ ಮಾನವನ ಮೂಲಪ್ರವೃತ್ತಿ ಬದಲಾಗಿಲ್ಲ. ತಾನು, ತನ್ನದು — ಈ ಸ್ವಾರ್ಥ ಬುದ್ಧಿಯಿಂದಲೇ ಜನರು ಜಗತ್ತಿನ ಪ್ರತಿಯೊಂದನ್ನೂ ತಮ್ಮ ಭೋಗಕ್ಕಾಗಿ, ಸುಖಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಕೋಟ್ಯಂತರ ಆಸ್ತಿ, ಸೊತ್ತು ಇವನ್ನೆಲ್ಲ ಕೂಡಿ ಹಾಕಿ, ಇತರ ಮಾನವರ ಕಷ್ಟ, ಸುಖಗಳ ಬಗ್ಗೆ ಸ್ವಲ್ಪವೂ ಚಿಂತಿಸದ ಅನೇಕ ಮಂದಿ ವ್ಯವಹಾರ ಚತುರರು ಇಂದು, ಇತರರ ಬಗೆಗೂ ಆಲೋಚಿಸಬೇಕಾದ ಪರಿಸ್ಥಿತಿ ಒದಗಿಬಂದಿದೆ. ಸೊತ್ತು, ಭೌತಿಕ ವಸ್ತು, ಹಣ ಇವೇ ಮುಖ್ಯವಲ್ಲ; ಮಾನವನಿಗೆ ಪ್ರಾಣ, ಆರೋಗ್ಯ, ಸಹ ಬಾಳ್ವೆ, ಶಾಂತಿ — ಇವುಗಳೇ ಮುಖ್ಯ ಎಂದು ಎಲ್ಲರೂ ಅರಿತುಕೊಳ್ಳಲೇಬೇಕಾಗಿದೆ. ಎಷ್ಟೋ ಮಂದಿ ಕೋಟ್ಯಾಧೀಶರು, ದೇಶದ ಪ್ರಮುಖ ನಾಯಕರು, ಪ್ರಸಿದ್ಧ ವ್ಯಕ್ತಿಗಳು 'ಕೊರೊನ' ಪೀಡಿತರಾಗಿ ಮೃತ್ಯುವಶರಾಗಿರುವುದನ್ನು ಕಂಡಾಗ, ಈ ಪ್ರಪಂಚದಲ್ಲಿ ಯಾವುದೂ ಸ್ಥಿರವಲ್ಲ ಎಂಬ ಸತ್ಯ ನಮ್ಮ ಮನಸ್ಸಿಗೆ ಬಂದೇ ಬರಬೇಕು. ಈ ಸಂದರ್ಭದಲ್ಲಿ ಪ್ರಾಣರಕ್ಷಣೆ, ಆರೋಗ್ಯರಕ್ಷಣೆ ನಮ್ಮೆಲ್ಲರ ಆದ್ಯಕರ್ತವ್ಯ. ಇದರೊಂದಿಗೆ, ಎಂದೆಂದಿಗೂ ಸತ್ಯ

ವಾಗಿ ನಿಲ್ಲುವ ಶಾಶ್ವತ ಮೌಲ್ಯ, ಮಾನವೀಯ ಗುಣಗಳನ್ನು ನಾವು ಅರಿತುಕೊಳ್ಳುವುದು ಅಗತ್ಯ. ಮಾನವನ ಅಸಾಧಾರಣ ಕೊಡುಗೆಯಾದ ಬುದ್ಧಿ, ಹೃದಯಗಳನ್ನು ಜಾಗ್ರತಗೊಳಿಸಿ, ಅವುಗಳನ್ನು ನಮ್ಮ ಉಳಿವಿಗಾಗಿ ಹಾಗೂ ಉನ್ನತಿಗಾಗಿ ಬಳಸಿಕೊಳ್ಳುವ ಅಗತ್ಯ ಎಂದಿಗಿಂತ ಇಂದೇ ಅಧಿಕವಾಗಿದೆ.

## ಆಶಾದಾಯಕ ದೃಷ್ಟಿಕೋನ

ಈಗಿನ ಎಲ್ಲ ಗೊಂದಲಗಳ ನಡುವೆ ಸುದ್ದಿಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಹಲವು ಬಗೆಯಲ್ಲಿ ಭಯ ಹುಟ್ಟಿಸುವ, ಆತಂಕ-ಸಂದೇಹಗಳನ್ನು ತಂದೊಡ್ಡುವ ಅನೇಕ ವಿಷಯಗಳು ವಿನಿಮಯವಾಗುತ್ತಿವೆ. ಇಂಥ ವಿಷಯಗಳಲ್ಲಿ ಹಲವು ಸತ್ಯಗಳಾಗಿರುವಂತೆ, ಎಷ್ಟೋ ಸುಳ್ಳುಗಳೂ ಇರುತ್ತವೆ. ಯಾವುದು ನಿಜ, ಯಾವುದು ಸುಳ್ಳು ಎಂದು ನಿರ್ಧರಿಸಲಾಗದ ಸಂದರ್ಭದಲ್ಲಿ 'ಸುಳ್ಳು ವದಂತಿಗಳಿಗೆ ಕಿವಿಗೊಡಬೇಡಿ' ಎಂದು ಹಲವು ಮಂದಿ ಎಚ್ಚರಿಕೆ ನೀಡಿದರೂ ಈ ಬಗೆಯ ಸುದ್ದಿಗಳಿಗೆ ಕೊನೆಯಾಗುವುದಿಲ್ಲ. ಆದರೆ, ಇವುಗಳ ನಡುವೆ ನಮ್ಮ ಸುತ್ತಮುತ್ತ ಸ್ವತಃ ನಾವೇ ಕಾಣಬಹುದಾದ ಕೆಲವು ಉತ್ತಮ ಸಂಗತಿಗಳನ್ನು ಅನೇಕ ಮಂದಿ ಗಮನಿಸುವುದಿಲ್ಲ; ಗಮನಿಸಿದರೂ ಅವುಗಳಿಗೆ ಪ್ರಾಮುಖ್ಯತೆ ನೀಡುವುದಿಲ್ಲ. ಈಗ ಉಂಟಾಗಿರುವ ಪರಿಸ್ಥಿತಿಯಲ್ಲಿ ನಮಗರಿವಿಲ್ಲದೆ ಅನೇಕ ಆಶಾದಾಯಕವಾದ ಸಂಗತಿಗಳು ಮೂಡಿ ಬಂದಿವೆ : ಸಮುದ್ರ ಮಥನದಲ್ಲಿ ಹಾಲಾಹಲವೇ ಮೊದಲಿಗೆ ಮೂಡಿಬಂದರೂ ಕೊನೆಗೆ ದಿವ್ಯವಾದ ಅಮೃತ ಮೂಡಿಬಂದಂತೆ.

**೧) ಜೀವಂತಿಕೆ:** ಮನುಷ್ಯನಿಗೆ ತಾನು ಬದುಕಬೇಕು ಎಂಬ ಹಂಬಲ ಎಂದೂ ಇದ್ದದ್ದೆ. ಆದರೆ ಅದು ಇನ್ನಿಲ್ಲದಂತೆ ಹೊಮ್ಮಿಬರುವುದು ಸಾಯುವ ಗಳಿಗೆಯಲ್ಲಿ. ಮಾನವ ಜನ್ಮ ಅಪೂರ್ವ; ಅದನ್ನು ಉಳಿಸಿಕೊಳ್ಳಬೇಕು; ತಾನೂ ಬದುಕಬೇಕು, ಇತರರೂ ಬದುಕಬೇಕು ಎಂಬ ಕಾಳಜಿ ಪ್ರಪಂಚದಲ್ಲೆಲ್ಲ ಹಿಂದೆಂದೂ ಇಲ್ಲದಂತೆ ವ್ಯಕ್ತವಾಗಿದೆ.

**೨) ಒಗ್ಗಟ್ಟಿನ ಬಲ:** ಇಡೀ ದೇಶಕ್ಕೆ ದೇಶವೇ ವಿಪತ್ತನ್ನು ಎದುರಿಸುವ ಬಗೆ, ಎಲ್ಲರ ವಿಷಯವನ್ನು ತಾರತಮ್ಯವಿಲ್ಲದೆ ರಕ್ಷಣೆ ನೀಡುವ ಆಡಳಿತ ಸಂಸ್ಥೆಗಳು; ರಾಜ್ಯ, ದೇಶ, ಪ್ರಪಂಚ — ಎಲ್ಲ ಘಟಕಗಳೂ ತಮ್ಮ ತಮ್ಮ ಪ್ರಜೆಗಳನ್ನು ಒಟ್ಟಾಗಿ ರಕ್ಷಿಸುವ ಪಣ ತೊಟ್ಟಿರುವುದು — ಇಡೀ ಜಗತ್ತಿನಲ್ಲೇ ಈ ಪ್ರಮಾಣದಲ್ಲಿ ಹಿಂದೆ ಕಂಡುಬಂದಿಲ್ಲ.

**೩) ಸೇವಾ ಕೈಂಕರ್ಯ:** ಆಡಳಿತ ಯಂತ್ರಗಳಷ್ಟೇ ಅಲ್ಲದೆ, ಅನೇಕ ಖಾಸಗಿ ಸಂಘಸಂಸ್ಥೆಗಳು, ಹಲವು ಮಂದಿ ಸಮಾಜ ಸೇವಕರು ಸ್ವಯಂಪ್ರೇರಿತರಾಗಿ ಸಂತ್ರಸ್ತ ಜನರ ನೆರವಿಗೆ ಮುನ್ನುಗ್ಗುತ್ತಿರುವುದು ಎಲ್ಲೆಡೆ ಕಂಡು ಬರುತ್ತಿರುವ ಸಾಮಾನ್ಯ ಸಂಗತಿ. ಇದು ಎಷ್ಟರಮಟ್ಟಿಗೆ ಸಫಲವಾಗಿದೆ, ಎಷ್ಟರಮಟ್ಟಿಗೆ ಅಗತ್ಯವಿರುವವರನ್ನು ತಲುಪುತ್ತದೆ, ಎಷ್ಟು ಬಗೆಯಲ್ಲಿ ಪಕ್ಷಪಾತದಿಂದ ಕೂಡಿದೆ — ಇತ್ಯಾದಿ ಪ್ರಶ್ನೆಗಳನ್ನು ಕೇಳುವವರಿದ್ದಾರೆ. ಈ ಕಾರ್ಯದಲ್ಲಿ ಹಲವು ರೀತಿಯ ಹೆಚ್ಚು-ಕಡಿಮೆ ವ್ಯತ್ಯಯಗಳಾಗುತ್ತಿರಲೂಬಹುದು. ಆದರೆ ಒಟ್ಟಾರೆಯಾಗಿ, ಇತರರಿಗೆ ನೆರವು ನೀಡುವ ವ್ಯಾಪಕ ಕಾರ್ಯದಿಂದ ಸಾಕಷ್ಟು ಒಳ್ಳೆಯದಾಗುತ್ತದೆ ಎಂಬುದು ನಿಸ್ಸಂದೇಹ. ಕಡೇಪಕ್ಷ, ಇತರರಿಗೆ ನೆರವು ನೀಡಬೇಕೆಂಬ ಅರಿವು ಎಲ್ಲೆಡೆ ಮೂಡಿಬರುತ್ತಿದೆ; ಇದು ಸ್ವಾಗತಾರ್ಹ. ಸೇವೆ, ಕರ್ಮಯೋಗದ ಅಗತ್ಯವನ್ನು ನಾವು ಮನಗಾಣಬೇಕಾಗಿರುವುದು ಇಂಥ ಸಂದರ್ಭದಲ್ಲೇ.

**೪) ಮಾನವನ ಇತಿಮಿತಿ:** ವಿಜ್ಞಾನ, ತಂತ್ರಜ್ಞಾನಗಳ ಅಭಿವೃದ್ಧಿಯಿಂದ ಮಾನವ ತಾನು ಏನನ್ನಾದರೂ ಮಾಡಬಲ್ಲ, ಇಡೀ ಪ್ರಕೃತಿಯನ್ನೇ ತನ್ನ ಅಂಕೆಯಲ್ಲಿಟ್ಟುಕೊಂಡು ಜಗತ್ತನ್ನೇ ನಿಯಂತ್ರಿಸಬಲ್ಲ ಎಂಬ ಅಹಂಕಾರ ಇಂದು ಅಡಗಿಹೋಗಿದೆ. ಪ್ರಕೃತಿ ಕೋಪಿಸಿಕೊಂಡರೆ ಮಾನವ ಏನೇನೂ ಅಲ್ಲ; ಕ್ಷುದ್ರ ಕ್ರಿಮಿಕೀಟಕ್ಕೆ ಸಮ ಎಂಬುದನ್ನು ಇಂದು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಲಕ್ಷಾಂತರ ಮಂದಿ ಕೊರೊನ ಸೋಂಕಿಗೆ ಒಳಗಾಗುತ್ತಿರುವುದು, ಪ್ರತಿದಿನ ಸಾವಿರಾರು ಮಂದಿ ಕೊರೊನಾದಿಂದ ಸಾವಿಗೀಡಾಗುತ್ತಿರುವುದು — ಇದರಿಂದ ಅತ್ಯಂತ ಅಭಿವೃದ್ಧಿ ಹೊಂದಿದ ದೇಶಗಳೇ ತತ್ತರಿಸಿಹೋಗಿವೆ; ಏನೂ ಮಾಡಲಾಗದೆ ಕೈಚೆಲ್ಲಿ ಬಿಟ್ಟಿವೆ. ಪ್ರಕೃತಿಯ ಮುಂದೆ ಮಾನವನ ಶಕ್ತಿ ಏನೇನೂ ಅಲ್ಲ ಎಂಬುದನ್ನು ಮಾನವ ಅರಿತು ಸಾಮರಸ್ಯದಿಂದ ನಡೆಯಬೇಕಾಗಿದೆ. ಆದರೆ ಸ್ವಾಮೀಜಿ ಹೇಳುವಂತೆ, ಮಾನವ ಪ್ರಕೃತಿಯನ್ನು ಮೀರಿಹೋಗಬೇಕಾದುದು ಆಂತರಿಕವಾಗಿ, ಆಧ್ಯಾತ್ಮಿಕವಾಗಿ. ನಿಸರ್ಗದ ಸಂಪತ್ತನ್ನು ಕಬಳಿಸುವ ಮೂಲಕವಲ್ಲ; ಮಾನವನು ತನ್ನ ಇತಿಮಿತಿಗಳನ್ನರಿತು, ತನ್ನ ಆಧ್ಯಾತ್ಮಿಕ ಶಕ್ತಿಯನ್ನು ಎತ್ತರಕ್ಕೇರಿಸುವ ಮೂಲಕ.

## ಸಂಪತ್ತೇ ಮುಖ್ಯವಲ್ಲ

ಆರ್ಥಿಕ ದೃಷ್ಟಿಯಿಂದ ಜಗತ್ತಿನ ವಿದ್ಯಮಾನಗಳನ್ನು ಗಮನಿಸುವಾಗ, ಸಂಪದ್ಭರಿತರಾದವರೆಲ್ಲ ಇತರರನ್ನು ತುಳಿದೋ, ವಂಚಿಸಿಯೋ ಅಥವಾ ನಿರ್ನಾಮಗೊಳಿಸಿಯೋ ಮೇಲಕ್ಕೆ ಬಂದುದನ್ನು ಕಾಣುತ್ತೇವೆ. ವ್ಯಕ್ತಿಗಳು, ಕಂಪನಿಗಳು, ದೇಶ ಅಥವಾ ಒಕ್ಕೂಟಗಳು ಈ ರೀತಿ ಮಾಡಿದ್ದಿದೆ. ಈ ರೀತಿ ಮಾಡದೆ, ತಮ್ಮ ಏಳಿಗೆಯೊಂದಿಗೆ ಇತರರ ಏಳಿಗೆಯನ್ನೂ ಪರಿಗಣಿಸುವ, ಪ್ರವೃತ್ತಿ ಕೂಡ ಇದೆ. ಆದರೆ ಏಳಿಗೆ ಹೊಂದಿದವರ ದೃಷ್ಟಿ ಯಾವಾಗಲೂ 'ಕೂಡಿಹಾಕುವ' ಹಾಗೂ 'ಇತರರಿಗಿಂತ ಹೆಚ್ಚನ್ನು ಹೊಂದುವ' ಕಡೆಗೇ ಇರುತ್ತದೆ ಎಂಬುದು ಸತ್ಯ. ಈ ದೃಷ್ಟಿ ಇಂದು ಮಿಥ್ಯೆಯೆಂದು ಸ್ಪಷ್ಟವಾಗಿದೆ. ದೇಶ-ದೇಶಗಳೇ ಆರ್ಥಿಕ ಕುಸಿತವನ್ನು ಕಾಣುತ್ತಿದೆ. ಕಂಪೆನಿ, ಉದ್ದಿಮೆ, ಉತ್ಪನ್ನಗಳು ನಿಂತುಹೋಗಿವೆ. 'ಕೊಳ್ಳುಬಾಕ' ಸಂಸ್ಕೃತಿ (consumerism) ತನ್ನ ಪೊಳ್ಳುತನವನ್ನು ಜಗಜ್ಜಾಹೀರು ಮಾಡಿಬಿಟ್ಟಿದೆ. ಜಾಗತಿಕ 'ಲಾಕ್

ಡೌನ್’ನ ಪರಿಣಾಮವಾಗಿ ಇನ್ನೆಷ್ಟು ಕಾಲ ಆರ್ಥಿಕ ಕುಸಿತ, ಏರುಪೇರುಗಳು ಉಂಟಾಗಬಲ್ಲವೋ, ಅದರ ಪರಿಣಾಮವಾಗಿ ಇನ್ನು ಯಾವ ಯಾವ ಅನಾಹುತಗಳು ಉಂಟಾಗುವವೋ ಹೇಳ ಬಲ್ಲವರಾರು? ಆದರೆ ಇದಂತೂ ಸತ್ಯ: ಕೇವಲ ಸಂಪತ್ತು ಇದ್ದ ರಷ್ಟೇ ಸಾಲದು, ಜಗತ್ತಿನಲ್ಲಿ ನೆಮ್ಮದಿಯ ಬದುಕಿಗೆ ಇತರ ವ್ಯಕ್ತಿಗಳ, ದೇಶಗಳ ನೆಮ್ಮದಿಯೂ ಮುಖ್ಯ ಎಂಬುದನ್ನು ಜಗತ್ತು ಕಂಡುಕೊಂಡಿದೆ.

## ತ್ಯಾಗಕ್ಕೆ ಸರಿಸಮವಿಲ್ಲ

ವ್ಯಕ್ತಿಯೊಬ್ಬನ ನಿಜವಾದ ವ್ಯಕ್ತಿತ್ವ ಪ್ರಕಟವಾಗುವುದು ಅತ್ಯಂತ ಸಂದಿಗ್ಧದ ಸಮಯದಲ್ಲಿ ಎಂಬ ಮಾತೊಂದಿದೆ. ಅಂಥ ಸಂದಿಗ್ಧದ ಪರಿಸ್ಥಿತಿ ಈಗ ಇಡೀ ಪ್ರಪಂಚಕ್ಕೇ ಒದಗಿ ಬಂದಿದೆ. ಈ ಸಮಯದಲ್ಲಿ ದೇಶ-ದೇಶಗಳೆಂಬ ತಾರತಮ್ಯವಿಲ್ಲದೆ, ವ್ಯಕ್ತಿ-ವ್ಯಕ್ತಿಗಳಲ್ಲಿ ಜಾತಿ-ಧರ್ಮ-ಸಮುದಾಯ-ಅಂತಸ್ತುಗಳೆಂಬ ಭೇದವಿಲ್ಲದೆ ಎಲ್ಲರೂ ತ್ಯಾಗದ ಮನೋಭಾವವನ್ನು ಕಲಿಯ ಬೇಕಾಗಿದೆ. ತಮ್ಮ ಸ್ವಾತಂತ್ರ್ಯ, ಸುಖ, ಪ್ರಯತ್ನಗಳನ್ನು ಅದುಮಿ ಹಿಡಿದು, ತಮ್ಮ ಮನೆಯೊಳಗೇ ನಿಂತು ಸಂಯಮ ತೋರ್ಪಡಿಸುವುದೆಂದರೆ ಅದೆಂಥ ತ್ಯಾಗ! ಅನೇಕರು ಇದರ ಶಕ್ತಿಯನ್ನು ಅರಿಯಲಾರರು. ಆದರೆ ಕೇವಲ ಕೊರೊನಾದಿಂದ ಮುಕ್ತಿಯಷ್ಟೇ ಅಲ್ಲ ಇದರ ಉಪಯುಕ್ತತೆ; ಜನರಿಗೆ ತಮ್ಮ ಅಂತಃಶಕ್ತಿಯನ್ನು ಅರಿತುಕೊಳ್ಳುವ ಒಂದು ಅವಕಾಶವಿದು. ಯಾವಾಗಲೂ ತಮ್ಮ ತಮ್ಮ ಕೆಲಸ, ವ್ಯವಹಾರಗಳಲ್ಲೇ ಮುಳುಗಿದ್ದ ಜನರು ಈ ಅವಕಾಶದಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬಹುದು. ತಮ್ಮದೇ ಜಗತ್ತಿನಲ್ಲಿ ಮುಳುಗಿರುತ್ತಿದ್ದ ಅವರು, ಅದರಾಚೆಗೂ ಏನೋ ಇದೆ ಎಂದು ಅರಿತುಕೊಳ್ಳಬಹುದಾಗಿದೆ. ಎಷ್ಟೋ ಮಂದಿ ಅಧ್ಯಯನ, ಕರಕುಶಲ ಕಲೆ, ಯೋಗ-ಧ್ಯಾನ, ಸಾಧನೆ ಮುಂತಾದವನ್ನು ಮಾಡುತ್ತ ಈ ಅವಧಿಯನ್ನು ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅನಿವಾರ್ಯವಾಗಿ ಉಂಟಾಗಿರುವ ‘ಲಾಕ್‌ಡೌನ್’ ಪರಿಸ್ಥಿತಿ ನಮ್ಮ ಪಾಲಿಗೆ ‘ಶಾಪ’ವೆನಿಸಿದೆ, ಅದರ ಸದುಪಯೋಗದಿಂದ ಅದನ್ನೂ ಅಮೂಲ್ಯ ‘ವರದಾನ’ವನ್ನಾಗಿ ನಾವು ಪರಿವರ್ತಿಸಿಕೊಳ್ಳಬೇಕಾಗಿದೆ.

ಎಲ್ಲಕ್ಕಿಂತ ಹೆಚ್ಚು ತ್ಯಾಗದ ಪ್ರದರ್ಶನ ಮಾಡುವ ಜನರನ್ನು ನಾವು ಪೂಜ್ಯಭಾವದಿಂದ ನೋಡಬೇಕಾಗಿದೆ, ಕರುಣೆ-ಅನುಕಂಪಗಳಿಂದಲ್ಲ. ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಕೊರೊನಾ ಪೀಡಿತರ ರಕ್ಷಣೆಗೆ ಮುಂದಾಗಿರುವವರೆಂದರೆ: ವೈದ್ಯರು, ನರ್ಸ್‌ಗಳು, ಇತರ ವೈದ್ಯಕೀಯ ಕಾರ್ಯಕರ್ತರು, ಪೋಲೀಸರು, ಆಶಾ ಕಾರ್ಯಕರ್ತೆಯರು ಹಾಗೂ ಜನರ ಕಾಳಜಿಗಾಗಿ ಸದಾ ಮಿಡಿಯುತ್ತಿರುವ ಜನನಾಯಕರು. ಹಲವೆಡೆ ಜನರು ಅಜ್ಞಾನದಿಂದ ಇಂತಹ ಜನರ ತ್ಯಾಗವನ್ನು ಅರಿತುಕೊಳ್ಳದೆ, ಅವರ ಮೇಲೆಯೇ ದೌರ್ಜನ್ಯವನ್ನು ಎಸಗಿರುವ ಕೃತ್ಯಗಳು ನಡೆದಿವೆ; ಇದು ನಿಜಕ್ಕೂ ದುರದೃಷ್ಟಕರ, ಖಂಡನಾರ್ಹ. ದುಷ್ಕೃತ್ಯಗಳಿಗೆ ಹಲವು ಬಾರಿ ಕಠಿಣಕ್ರಮಗಳೇ ಔಷಧಿ.

## ಕಾಳಿಯ ರುದ್ರನರ್ತನ

ಇಡೀ ಮಾನವಕೋಟಿಯು ಪ್ರಕೃತಿಯ ಕರಾಳ ದೃಷ್ಟಿಗೆ ಒಳಗಾಗಿರುವ ಪ್ರಸ್ತುತ ಸಂದರ್ಭವನ್ನು ಕಂಡಾಗ, ಮಾನವನು ತನ್ನ ಅಸಹನೀಯ ಪರಿಸ್ಥಿತಿಯಲ್ಲಿ ವಿಶ್ವಮಾತೆಯಾದ ಅದೇ ಪ್ರಕೃತಿಯನ್ನು ಮುಗ್ಧಮನಸ್ಸಿನಿಂದ ಪ್ರಾರ್ಥಿಸುವುದೊಂದೇ ಅತ್ಯಂತ ಪರಿಣಾಮಕಾರಿಯಾದ ಸಾಧನೆ. ಪ್ರತಿಯೊಬ್ಬ ಆಸ್ತಿಕನೂ ತನ್ನ ಅಂತರಂಗದಲ್ಲಿಇಡೀ ಮಾನವಕೋಟಿಗಾಗಿ ಭಗವಂತನನ್ನು ಪ್ರಾರ್ಥಿಸುತ್ತಾನೆ: ‘‘ಭಗವಂತ, ಎಲ್ಲ ಮಾನವರನ್ನೂ ಈ ಭೀಕರ ವೈರಾಣುವಿನಿಂದ ರಕ್ಷಿಸು.’’

ಜಗನ್ಮಾತೆ ಕಾಳಿ ತನ್ನ ಭೀಕರ ಸ್ವರೂಪವನ್ನು ತೋರಿ, ಕ್ರುದ್ಧಳಾಗಿ ನಿಂತಾಗ ಇಡೀ ಪ್ರಪಂಚವೇ ತಲ್ಲಣಿಸುವುದು. ಸೃಷ್ಟಿಕರ್ತೆ ಆಕೆ; ಜಗತ್ತನ್ನು ಪಾಲಿಸುವವಳೂ ಅವಳೆ. ಆದರೆ ತನಗೆ ಇಚ್ಛೆ ಬಂದಾಗ ಇಡೀ ಪ್ರಪಂಚವನ್ನೇ ನುಂಗಿ ನೊಣೆಯುತ್ತ ಸಂಹಾರ ಮಾಡುವವಳೂ ಅವಳೆ. ನಾವು ನಮ್ಮ ದೃಷ್ಟಿಯಿಂದ ಸಂಹಾರ ಕಾರ್ಯವನ್ನು ಭೀಕರವೆನ್ನಬಹುದು. ಆದರೆ ಅವಳಿಗೆ ಎಲ್ಲವೂ ಆಟ. ಸ್ವಾಮಿ ವಿವೇಕಾನಂದರು ‘Kali the Mother’ ಎಂಬ ತಮ್ಮ ಕವನದಲ್ಲಿ ಹೀಗೆ ಹೇಳುತ್ತಾರೆ: ‘‘ನಿನ್ನ ಹೆಸರು ಕರಾಳಿ. ನಿನ್ನ ಉಚ್ಛ್ವಾಸ ನಿಃಶ್ವಾಸಗಳಲ್ಲಿ ಮೃತ್ಯುವಿದೆ. ನಿನ್ನ ಭೀಮ ಚರಣಗಳ ಒಂದು ಅಡಿ ಪ್ರಪಂಚವನ್ನೇ ನಾಶಮಾಡುವುದು. ಕಾಳೀ! ಸರ್ವಭಕ್ಷಕಳು ನೀನು; ಬಾ ತಾಯಿ, ನನ್ನೆಡೆಗೆ ಬಾ!

‘‘ಯಾರಿಗೆ ದುಃಖವನ್ನು ಪ್ರೀತಿಸಿ ಮೃತ್ಯುವನ್ನೇ ಅಪ್ಪಿಕೊಳ್ಳುವ ಸಾಹಸವಿದೆಯೋ, ಯಾರು ಅವಳ ಪ್ರಳಯ ನಾಟ್ಯದಲ್ಲಿ ಭಾಗಿಯಾಗಬಲ್ಲರೋ, ಅವರ ಸಮೀಪಕ್ಕೆ ತಾಯಿ ಬರುವಳು.’’

ಮೃತ್ಯುವನ್ನು ಆಲಂಗಿಸಲು ಹೊರಟವನು ಆತ್ಮಹತ್ಯೆ ಮಾಡಿದಂತೆ — ಎಂದು ಕೆಲವರು ತಪ್ಪು ತಿಳಿದುಕೊಳ್ಳುವ ಸಾಧ್ಯತೆಯಿದೆ ಇಲ್ಲಿ. ಆದರೆ ಇದು ಸತ್ಯದ ಇನ್ನೊಂದು ಮುಖ. ಕಠೋರ ದುರಂತದ ಹಿಂದೆ ಕೂಡ ಅಗೋಚರ ಶಕ್ತಿಯ ಇಚ್ಛೆಯಿದೆ ಎಂಬುದು ಒಂದು ಮಹಾತತ್ತ್ವ. ಈ ತತ್ತ್ವವನ್ನು ಅರಿತು ನಾವು ಆ ಶಕ್ತಿಯನ್ನು ಪ್ರಾರ್ಥಿಸಬೇಕು; ಆಗಲೇ ಬೆಳಕಿನ ಕಿರಣ ಗೋಚರಿಸಬಲ್ಲದು.

### ಮೇ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೪ | ಸೋಮವಾರ | ಏಕಾದಶಿ |
| ೭ | ಗುರುವಾರ | ಬುದ್ಧಪೂರ್ಣಿಮೆ |
| ೧೮ | ಸೋಮವಾರ | ಏಕಾದಶಿ |

### ಜೂನ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೨ | ಮಂಗಳವಾರ | ಏಕಾದಶಿ |
| ೧೭ | ಬುಧವಾರ | ಏಕಾದಶಿ |